1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

S.C.103/2017

ದಿಃ 08.10.2021

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-6 Pw-4

ಹೆಸರು : ಪ್ರಜ್ವಲ್
ತಂದೆಯ ಹೆಸರು : ಚಂದ್ರಶೇಖರ್
ವಯಸ್ಸು : 18 ವರ್ಷ
ಉದ್ಯೋಗ : ವಿದ್ಯಾರ್ಥಿ
ವಾಸಸ್ಥಳ : ದೇವಮಾಚೋಹಳ್ಳಿ,
ಬೆಂಗಳೂರು ದಕ್ಷಿಣ ತಾಲ್ಲೂಕು

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಮೃತ ನವೀನ್‌ಕುಮಾರ್ ನನ್ನ ಅಣ್ಣ. ಚಾಸಾ.2 ನನಗೆ ಗೊತ್ತಿಲ್ಲ. ಚಾಸಾ.4 ಮತ್ತು 5ರವರು ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿಗಳು ಗೊತ್ತಿಲ್ಲ. ಅವರನ್ನು ಈ ಹಿಂದೆ ನೋಡಿಲ್ಲ. ನನ್ನ ಅಣ್ಣ ನವೀನ್ ಕುಮಾರ್‌ನ ಹತ್ಯೆಯಾಗಿರುತ್ತದೆ. ನಮ್ಮ ಮನೆಯ ಮುಂಭಾಗದಲ್ಲಿ ವಾಲಿಬಾಲ್ ಆಡುತ್ತಿದ್ದ ಸಮಯದಲ್ಲಿ ದಿಃ10.10.2016ರಲ್ಲಿ ಹತ್ಯೆಯಾಗಿರುತ್ತದೆ. ಯಾರು ಆತನ ಹತ್ಯೆ ಮಾಡಿರುತ್ತಾರೆಂದು ಗೊತ್ತಿಲ್ಲ. ನಾನು ವಾಲಿಬಾಲ್ ಆಟವಾಡಿಕೊಂಡು ಮನೆಗೆ ಬರುತ್ತಿದ್ದು ಗಲಾಟೆಯ ಸದ್ದು ಕೇಳಿ ನಾನು ಮತ್ತೆ ವಾಲಿಬಾಲ್ ಮೈದಾನಕ್ಕೆ ಹೋದೆ ಆಗ ಅಲ್ಲಿ ಬೇರೆ ಯಾರೂ ಇರಲಿಲ್ಲ. ಕೂಡಲೇ

ನಾವು ನನ್ನ ಅಣ್ಣನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನನ್ನ ಅಣ್ಣನ ದೇಹವೆಲ್ಲಾ ಕೊಯ್ದು ಸ್ಥಿತಿಯಲ್ಲಿತ್ತು. ನಾನು ನನ್ನ ಅಣ್ಣನನ್ನು ನನ್ನ ಎದುರೇ ಹತ್ಯೆ ಮಾಡಿರುತ್ತಾರೆಂದು ಪೊಲೀಸರಿಗೆ ಹೇಳಿಕೆ ನೀಡಿಲ್ಲ. ನನ್ನ ಅಣ್ಣನ ಕೊಲೆ ವಿಷಯವಾಗಿ ಆರೋಪಿಗಳನ್ನು ಈ ಹಿಂದೆ ನೋಡಿಲ್ಲ. ಅವರುಗಳನ್ನು ಗುರುತಿಸಿ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ನಾನೇ ಪೊಲೀಸರು ಬಂದಾಗ ಘಟನಾ ಸ್ಥಳ ತೋರಿಸಿ ಆರೋಪಿಗಳು ಅದೇ ಸ್ಥಳದಲ್ಲಿ ನನ್ನ ಅಣ್ಣನ ಹತ್ಯೆ ಮಾಡಿರುತ್ತಾರೆಂದು ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

ನನಗೀಗ ಓದಿ ಹೇಳಿ, ನಿ.ಪಿ.10 ಮತ್ತು 11 ಎಂದು ಗುರುತಿಸಲಾದ ದಸ್ತಾವೇಜಿನಂತೆ ಪೊಲೀಸರಿಗೆ ಹೇಳಿಕೆ ಮತ್ತು ಮರುಹೇಳಿಕೆ ನೀಡಿದ್ದೇನೆಂದು ಸೂಚಿಸುವುದು ಸರಿಯಲ್ಲ. ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ. ಟಿ.ಜಿ., ವಕೀಲರಿಂದ ಆರೋಪಿಗಳ ಪರವಾಗಿಃ ಇಲ್ಲವೆಂದಿದ್ದಾರೆ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಮರುಳಸಿದ್ಧಾರಾಧ್ಯ ಹೆಚ್.ಜೆ)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.